ಒಂದು ಚೂರು ತಿದಿ ಒತ್ತಿದ್ದೆ. ಆದರೆ, ಅವಳು ತನ್ನ ಕನಸನ್ನು ಸಾಕಾರಗೊಳಿಸಲು ಚಾರುದತ್ತರ 'ರಕ್ತಚಂದನ'ದ ಹಸ್ತಪ್ರತಿಯನ್ನೇ ಅಪಹರಿಸಲು ಪ್ರಯತ್ನಿಸುತ್ತಾಳೆ ಎಂಬ ಸಣ್ಣ ಸುಳಿವೂ ಇರಲಿಲ್ಲ.

ವಿಲಾಸಿನಿಯು ಹೇಳಿದ ಪ್ರಕಾರ ಅವಳು 'ರಕ್ತಚಂದನ'ವನ್ನು ಅಪಹರಿಸುವ ಉದ್ದೇಶದಿಂದ ನೆಲದ ಮೇಲೆ ಸ್ಟೂಲು ಇಟ್ಟು ಅದರ ಮೇಲೆ ಹತ್ತಿ ಅಟ್ಟದೊಳಕ್ಕೆ ಇಣುಕಿದ್ದು ಹೌದು.

ಆದರೆ, ಸ್ಟೂಲಿನಿಂದ ಕೆಳಗೆ ಬಿದ್ದಿದ್ದಳು. ಬೆನ್ನಿನ ನರಕ್ಕೆ ಚೂರು ಏಟು ಮಾಡಿಕೊಂಡು ಕೆಲವು ಕಾಲ ಹಾಸಿಗೆ ಹಿಡಿದಿದ್ದಳು.

ಇದನ್ನು ವಿಲಾಸಿನಿಯೇ ನನಗೆ ಹೇಳಿದ್ದಳು.

ಅವಳ ಪ್ರಕಾರ ಅವಳ ಸರ್ವನಾಶಕ್ಕೆ ನಾನೇ ಕಾರಣವಂತೆ. ಸಾಧಾರಣ ಗೃಹಿಣಿಯಾಗಿದ್ದ ಅವಳನ್ನು ಉದ್ದೀಪನಗೊಳಿಸಿ, ಅವಳ ಮಸ್ತಕದೊಳಗೆ ನಾನಾ ಯೋಚನೆಗಳನ್ನು ಎಬ್ಬಿಸಿ, ಚಾರುದತ್ತರ 'ರಕ್ತಚಂದನ'ವನ್ನು ಅಪಹರಿಸಿ ಅದನ್ನು ಸ್ತ್ರೀವಾದೀ ದೃಷ್ಟಿಕೋನದಿಂದ ಮರುಪೂರಣಗೊಳಿಸುವಂತೆ ಅವಳ ತಲೆ ಕೆಡಿಸಿದ್ದು ನಾನೇ ಅಂತೆ.

'ಬೆನ್ನೂ ಮುರಿದು ಹೋಯಿತು; 'ರಕ್ತಚಂದನ'ವೂ ಸಿಗಲಿಲ್ಲ. ದುಷ್ಟ, ಎಲ್ಲ ನಿನ್ನಿಂದಾಗಿ ಆದ ಅನಾಹುತ.' ಎಂದು ಶಾಪ ಹಾಕಿದ್ದಳು.

★★★

ಕಳೆದ ವರ್ಷ ಇದೇ ಆಷಾಢದ ಮಹಾಮಳೆ, ಪ್ರಳಯದಂತಹ ಭೂಕುಸಿತ, ಕರಾಳವಾದ ಕೊರೊನಾ ಈ ಎಲ್ಲದರ ನಡುವೆ ಕತ್ತಲ ಹೊತ್ತಲ್ಲಿ ಕಾಫಿ ತೋಟಕ್ಕೊಂದು ಸುತ್ತು ಹೋಗಿಬಂದು, ಊಟಮಾಡಿ ಮಲಗಿದ್ದ ಚಾರುದತ್ತರು ಎದ್ದಿರಲಿಲ್ಲ. ಮಾವನ ಬೆಳಗಿನ ಯೋಗಾಭ್ಯಾಸ ಮುಗಿದಿರಬಹುದು ಎಂದುಕೊಂಡು ಎಂದಿನ ಹಾಗೆ ಖಡಕ್ ಚಾ ಹಿಡಕೊಂಡು ಹೋದ ಸೊಸೆ ಸೌಭಾಗ್ಯ ಅವರ ತಣ್ಣಗಿನ ದೇಹವನ್ನು ಮುಟ್ಟಿ ನೋಡಿ, ನನ್ನನ್ನು ಬಿಟ್ಟು ಬೇರೆ ಎಲ್ಲರಿಗೂ ಫೋನ್ ಮಾಡಿದ್ದರು. ಅವರಿಗೆ ನನ್ನ ಮೇಲೆ ಎಷ್ಟು ಸಿಟ್ಟು ಅಂದರೆ ಚಾರುದತ್ತರು ತೀರಿಹೋದಾಗಲೂ ವಿಷಯ ತಿಳಿಸದಷ್ಟು.

ಚಾರುದತ್ತರ ಮರಣದ ಸುದ್ದಿ ನನಗೆ ಗೊತ್ತಾಗಿದ್ದು ಅವರು ತೀರಿಹೋಗಿ ಮಾರನೇ ದಿನ ಮಧ್ಯಾಹ್ನ. ಕೊರೊನಾದ ಮೊದಲ ಅಲೆ ಅದಾಗ ತಾನೇ ಉಲ್ಬಣಿಸುತ್ತಿದ್ದ ಕಾರಣ ಫೇಸ್‌ಬುಕ್ಕು ಲೈವಿನಲ್ಲೇ ಅವರಿಗೆ ಅಭಿಮಾನಿಗಳು ಶ್ರದ್ಧಾಂಜಲಿ ಅರ್ಪಿಸುತ್ತಿದ್ದರು. ಲೇಖಕಿ ವಿಲಾಸಿನಿ ಹಾಸಿಗೆಯಲ್ಲಿ ಮಲಗಿದ್ದಲ್ಲೇ ಗೋಡೆಗೆ ಒರಗಿ ಕುಳಿತು ಕಣ್ಣು ಮುಖ ಊದಿಸಿಕೊಂಡು ಲೈವಿನಲ್ಲಿ ಮುಳುಮುಳು ಅಳುತ್ತಾ ನಡುನಡುವೆ ಸ್ಪಷ್ಟವಾಗಿ ಮಾತಾಡುತ್ತಿದ್ದಳು. ಪಕ್ಕದಲ್ಲೇ ಅವಳ ಗಂಡನೂ, ಪಶುವೈದ್ಯರೂ ಆದ ಶೀಷೆ ಶೇಷಪ್ಪನವರು ಮಡದಿಯ ಮುಖವನ್ನೊಮ್ಮೆ ಮತ್ತು ಮೊಬೈಲಿನಲ್ಲಿ ಕೇಳಿಸುತ್ತಿದ್ದ ಅವಳ ಅಳುವನ್ನೊಮ್ಮೆ ನೋಡುತ್ತ, ನಡುನಡುವೆ ಜಾರಿಹೋಗುತ್ತಿದ್ದ ದಿಂಬನ್ನು ಅವಳ ಬೆನ್ನ ಹಿಂದಕ್ಕೆ ಸೇರಿಸುತ್ತ, ತಮ್ಮ ಮುಖವನ್ನು ಅಷ್ಟು ಅಗಲ ಮಾಡಿಕೊಂಡು ನಿಂತಿದ್ದರು.

ನನಗೆ ಚಾರುದತ್ತರು ತೀರಿಹೋದ ಆ ಸಂಕಟದ ನಡುವೆಯೂ ನಗು ಬರುತ್ತಿತ್ತು. ಫೇಸ್‌ಬುಕ್ಕು ಲೈವು ನಡೆಯುತ್ತಿದ್ದ ವಿಲಾಸಿನಿಯ ಮಲಗುವ ಕೋಣೆಯ ತುಂಬ ಬಣ್ಣ ಬಣ್ಣದ ಹೂವುಗಳನ್ನು ಬಿಡಿಸಿಟ್ಟಿದ್ದ ಹಳೆಯ ವಿದೇಶೀ ಮದ್ಯದ ಶೀಷೆಗಳು. ನಾಯಿಯ ಆಕಾರದಲ್ಲಿ, ಕುದುರೆಯ ಆಕಾರದಲ್ಲಿ, ಆನೆಯ ಆಕಾರದಲ್ಲಿ ಜೋಡಿಸಿಟ್ಟಿದ್ದ ಶೀಷೆಗಳೆಲ್ಲವೂ ಚಾರುದತ್ತರ ಒಡೆತನದ ಹಿಮದರ್ಶನ ಬಾರಿನಿಂದ ಶೇಷಪ್ಪನವರು ಸಂಗ್ರಹಿಸಿದವುಗಳು. ಅವುಗಳನ್ನು ಸಂಗ್ರಹಿಸಲೆಂದೇ ಅವರು ಮಡದಿ ವಿಲಾಸಿನಿಯನ್ನು ಕರೆದುಕೊಂಡು ಚಾರುದತ್ತರ ಆ ಬಾರಿನಲ್ಲಿ ನಡೆಯುತ್ತಿದ್ದ ನಮ್ಮ ಸಾಹಿತ್ಯ ಸಲ್ಲಾಪಕ್ಕೆ ಬರುತ್ತಿದ್ದರು. ಅದಕ್ಕಾಗಿಯೇ ಚಾರುದತ್ತರು ಅವರಿಗೆ ಶೀಷೆ ಶೇಷಪ್ಪ ಎಂಬ